**ಮಂಗಳಾ.ಎನ್**
**ನಟಿ, ರಂಗನಿರ್ದೇಶಕಿ,**

ಶ್ರೀರಂಗಧಾಮ, ೨೬/೨೦.
೨ನೇ ಮುಖ್ಯ ರಸ್ತೆ, ಮಾರೇನಹಳ್ಳಿ,
ವಿಜಯನಗರ, ಬೆಂಗಳೂರು-೫೬೦೦೪೦

ದಿನಾಂಕ: ೧೩.೬.೨೦೧೫

**ಗೆ,**

**ಎಕ್ಸಿಕ್ಯುಟೀವ್ ಡೈರೆಕ್ಟರ್**
**ಪ್ರಾಜೆಕ್ಟ್ ೫೬೦**
**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್**
**ಬೆಂಗಳೂರು**

ಮಾನ್ಯರೆ,

ನಾನು ಸುಮಾರು ೩೦ ವರುಷಗಳಿಂದ ರಂಗಭೂಮಿಯಲ್ಲಿ ನಿರಂತರವಾಗಿ ಕೆಲಸ ಮಾಡುತ್ತಾ ಬಂದಿದ್ದೇನೆ. ಸಮುದಾಯ, ಕರ್ನಾಟಕದ ಪ್ರತಿಷ್ಠಿತ ರಂಗಸಂಸ್ಥೆಯಾದ ರಂಗಾಯಣ, ಮೈಸೂರಿನಲ್ಲಿ ಕಲಾವಿದೆಯಾಗಿ ೧೬ ವರುಷ ಕಾರ್ಯನಿರತಳಾಗಿದ್ದು, ನಂತರ ರಾಜ್ಯದ ಹಲವೆಡೆ ನಾಟಕಗಳನ್ನು ನಿರ್ದೇಶಿಸುತ್ತಾ, ರಂಗಕಮ್ಮಟಗಳನ್ನು ನಡೆಸುತ್ತಾ ಬಂದಿದ್ದು, ಕಳೆದ ಹತ್ತು ವರುಷದಿಂದ ಸಂಚಾರಿ ಥಿಯೇಟರ್ ಸಂಸ್ಥೆಯನ್ನು ಕಟ್ಟಿ, ಹಲವಾರು ನಾಟಕಗಳ ಪ್ರಯೋಗವನ್ನೂ, ಯುವಕರಿಗಾಗಿ ಅಭಿನಯದ, ನೇಪಥ್ಯದ ಕಾರ್ಯಾಗಾರವನ್ನೂ, ಮಕ್ಕಳಿಗಾಗಿ ವಾರಾಂತ್ಯ ರಂಗಭೂಮಿಯನ್ನೂ, ಮತ್ತು ಬೇಸಿಗೆ ರಂಗ ಶಿಬಿರಗಳನ್ನೂ ನಡೆಸುತ್ತಾ, ಸಂಸ್ಥೆಯನ್ನೂ ನಿರ್ವಹಿಸುತ್ತಾ ಬಂದಿದ್ದೇನೆ

ಈ ನನ್ನ ರಂಗಯಾನದಲ್ಲಿ, ನಾನು ಅಭಿನಯಿಸಿದ, ನಿರ್ದೇಶಿಸಿದ ಹಲವಾರು ಪ್ರಯೋಗಗಳು ಕೇವಲ ಪ್ರೊಸೀನಿಯಂ ಗೆ ಮಾತ್ರವೇ ಮೀಸಲಾಗಿರದೆ, ಹೊಸ ಹೊಸ ಆವರಣಗಳಲ್ಲಿ ರಂಗ ಆವಿಷ್ಕಾರಗೊಂಡ ಪ್ರಕ್ರಿಯೆಯಲ್ಲಿ ಕಲಾವಿದೆಯಾಗಿ, ನಿರ್ದೇಶಕಿಯಾಗಿ ಭಾಗಿಯಾಗಿದ್ದೇನೆ. ಆ ಸಂದರ್ಭಗಳಲ್ಲಿ, ಅಂತಹ ಯೋಜನೆಯನ್ನು ಪರಿಕಲ್ಪಿಸುವ, ಜಾರಿಗೊಳಿಸುವ, ಕಟ್ಟುವ, ಅಭಿನಯಿಸುವ ಮತ್ತು ನಿರ್ದೇಶಿಸುವ ಅನುಭವವನ್ನು ಹೊಂದಿರುವ ಹಿನ್ನಲೆಯಲ್ಲಿ ಪ್ರಸ್ತುತ ತಮ್ಮ ಸಂಸ್ಥೆ ಪ್ರಕಟಿಸಿರುವ ಪ್ರಾಜೆಕ್ಟ್ ೫೬೦ ಯೋಜನೆಯು ನನ್ನನ್ನು ಮತ್ತೊಂದು ಕಲಿಕೆಯ ಜಿಗಿತಕ್ಕೆ ದೂಡಬಹುದೆಂಬ ಆಕಾಂಕ್ಷೆಯಿಂದ ಭಾಗವಹಿಸಲು ಇಚ್ಚಿಸುತ್ತೇನೆ.

ದಿನಾಂಕ ೨೫-೦೫-೨೦೧೫ ರಂದು ತಮ್ಮ ಸಂಸ್ಥೆಗೆ ಬಂದು ಯೋಜನೆಯ ವಿಷಯವಾಗಿ [redacted] ಚರ್ಚಿಸಿದ ಹಿನ್ನೆಲೆಯಲ್ಲಿ ಪ್ರಾಜೆಕ್ಟ್ ೫೬೦ ಯೋಜನೆಯಲ್ಲಿ ಭಾಗವಹಿಸುವ ನಿಟ್ಟಿನಲ್ಲಿ **'ವಿದ್ಯಾರ್ಥಿಭವನ'ದಲ್ಲೊಂದು ಸಾಹಿತ್ಯಾವಲೋಕನ"** ಎಂಬ ನನ್ನ ಆಲೋಚನೆಯ ಸಾರಾಂಶಗಳನ್ನೊಳಗೊಂಡ ಪತ್ರಕವನ್ನು ಸಲ್ಲಿಸುತ್ತಿದ್ದೇನೆ.

ವಂದನೆಗಳು.

ವಿಶ್ವಾಸದೊಂದಿಗೆ
Mangala
ಮಂಗಳಾ.ಎನ್

# ಇಂಡಿಯ ಫೌಂಡೇಷನ್ ಫಾರ್ ದಿ ಆರ್ಟ್ಸ್

# ಪ್ರಾಜೆಕ್ಟ್ 5-6-0, 2015

### ಆವರಣ ಕುರಿತ ಯೋಜನೆಯಲ್ಲಿ ಭಾಗವಹಿಸಲು ಪ್ರಸ್ತಾವನೆ

## ವಿದ್ಯಾರ್ಥಿಭವನದಲ್ಲಿ ಸಾಹಿತ್ಯಾವಲೋಕನ

**ಪ್ರಸ್ತುತದಲ್ಲಿ ನಾನು..**

ನಾನು ರಂಗ ನಟಿ, ರಂಗ ನಿರ್ದೇಶಕಿ, ವಸ್ತ್ರವಿನ್ಯಾಸಕಿ ಮತ್ತು ಅಭಿನಯ ಶಿಕ್ಷಕಿ.

ಬೆಂಗಳೂರಿನಲ್ಲಿ ಹುಟ್ಟಿ ಬೆಳೆದು, ಎನ್.ಎಂ.ಕೆ.ಆರ್.ವಿ ಕಾಲೇಜಿನಲ್ಲಿ ನನ್ನ ವ್ಯಾಸಂಗವನ್ನು ಮುಗಿಸಿ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸಾಹಿತ್ಯದಲ್ಲಿ ಎಂ.ಎ ಮಾಡಿ ಸಮುದಾಯ ರಂಗ ತಂಡದ ಮೂಲಕ ನಾಟಕರಂಗಕ್ಕೆ ಪಾದಾರ್ಪಣೆ ಮಾಡಿ, ನಂತರ ರಂಗಾಯಣದಲ್ಲಿ ಬಿ.ವಿ.ಕಾರಂತರ ಗರಡಿಯಲ್ಲಿ ನಾಟಕದ ಕಲಿಕೆಯ ಹಲವು ಸಾಧ್ಯತೆಗಳ ಬೆಳಕಿಗೆ ತೆರೆದುಕೊಂಡವಳು. ಅಲ್ಲಿಯೇ 13 ವರುಷಗಳ ಕಾಲ ರಂಗಕಲಾವಿದೆಯಾಗಿ ಕೆಲಸ ನಿರ್ವಹಿಸಿದ್ದೇನೆ. ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ನಿರ್ದೇಶಕರ ಜೊತೆ ಕೆಲಸ ಮಾಡಿದ್ದೇನೆ. ರಂಗಭೂಮಿಯಲ್ಲಿನ ಹೆಚ್ಚಿನ ಸಂಶೋಧನೆಗಾಗಿ ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಕೇಂದ್ರದಿಂದ ಜೂನಿಯರ್ ಮತ್ತು ಸೀನಿಯರ ಫೆಲೋಷಿಪ್ ಅನ್ನು ಮತ್ತು ಕರ್ನಾಟಕ ನಾಟಕ ಅಕಾಡೆಮಿ ನೀಡಿದ ಫೆಲೋಷಿಪ್ ಅನ್ನು ಪಡೆದಿದ್ದೇನೆ.

2004 ರಲ್ಲಿ ಬೆಂಗಳೂರಿನಲ್ಲಿ ಸಂಚಾರಿ ಥಿಯೇಟರ್ ಎಂಬ ರಂಗ ಸಂಸ್ಥೆಯನ್ನು ಸ್ಥಾಪಿಸಿ ಹತ್ತು ವರುಷದಿಂದ ನಿರಂತರವಾಗಿ ರಂಗಭೂಮಿಯಲ್ಲಿ ಕೆಲಸ ಮಾಡುತ್ತಾ ಬಂದಿದ್ದೇನೆ. ಯುವಕರಿಗಾಗಿ "ಪೂರ್ವರಂಗ" ಎಂಬ ಅಭಿನಯ ಕಾರ್ಯಾಗಾರವನ್ನು, ಮಕ್ಕಳಿಗಾಗಿ ವಾರಾಂತ್ಯ ರಂಗಭೂಮಿ ಮತ್ತು ಬೇಸಿಗೆ ರಂಗಶಿಬಿರಗಳನ್ನು ಮೂರು ವರುಷಗಳಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದೇನೆ. ಅಲ್ಲದೆ ಸಂಚಾರಿ ಥಿಯೇಟರ್ ಸಂಸ್ಥೆಯ ಕಲಾವಿದರು ಅಭಿನಯಿಸುವ ಸುಮಾರು ಹತ್ತು ನಾಟಕಗಳನ್ನು ಈಗಲೂ ನಗರದೆಲ್ಲೆಡೆ ಪ್ರದರ್ಶನಗೊಳ್ಳುತ್ತಲೇ ಇದೆ. ಸದ್ಯಕ್ಕೆ ಸಂಚಾರಿ ಥಿಯೇಟರ್ ನ ಸಮಸ್ತ ಜವಾಬ್ದಾರಿ ಯನ್ನು ನಿರ್ವಹಿಸುತ್ತಿದ್ದೇನೆ.

**ಆವರಣ – ಸಮಯ – ನಟ**

ಜಗವೆಂಬುದು ಒಂದು ನಾಟಕರಂಗ,
ರಂಗಮಂಚವಿದು ಅದರ ಪ್ರತಿಬಿಂಬ!

ಹೌದು, ಜಗತ್ತಿನ ಪ್ರತಿಯೊಂದು ವ್ಯಕ್ತಿ, ವಸ್ತು, ಕಣ ಎಲ್ಲಕ್ಕೂ ಅದರದೇ ಆದ ಆವರಣ ಇರುತ್ತದೆ. ಆವರಣ ಇರುವ ರೀತಿಗೆ ಅದು ವಿಶೇಷವೋ ಅಥವಾ ಆ ಆವರಣದೊಳಗೆ ವ್ಯಕ್ತಿ, ವಸ್ತು, ಕಣದಿಂದ ಫಲಿಸುವ ಒಂದು ಸಂಚಲನದಿಂದಾಗಿ ಅದು ವಿಶೇಷವಾಗುತ್ತದೋ ಎಂಬುದು ಒಂದು ಕೌತುಕ. ಸಮುದ್ರದ ದಂಡೆಯ ಮೇಲೆ ನಿಂತಿರುವ ವ್ಯಕ್ತಿ ತಾನು ನಿಂತಿರುವುದು ಸಮುದ್ರದ ಆದಿಯಲ್ಲೋ ಅಥವಾ ತುದಿಯಲ್ಲೋ ಎಂದು ಯೋಚಿಸುವ ಹಾಗೆ, ಆತ ಯಾವ ದಿಕ್ಕಿಗೆ ಮುಖ ಮಾಡಿ ನಿಂತಿದ್ದಾನೆ ಎಂಬುದರ ಮೇಲೆ ಆ ಆವರಣದ ಅರ್ಥ ಬದಲಾಗುತ್ತದೆ.  ಇಂತಹ ಹಲವಾರು ಬೆರಗುಗಳು ನಮ್ಮೊಳಗೆ ಉದ್ಭವಗೊಳ್ಳುವ ಹಾಗೆ ನಮ್ಮನ್ನು ಹುರಿಗೊಳಿಸಿದವರಲ್ಲಿ ನಮ್ಮ ಗುರುಗಳಾದ ಬಿ.ವಿ.ಕಾರಂತರು ಮೊದಲಿಗರು. ಅವರೊಡನೆ ಕೆಲಸ ಮಾಡಿದ ಸಂದರ್ಭದಲ್ಲಿ ಈ ರೀತಿ ಆವರಣ ಮತ್ತು ನಟನಿಗೆ ಸಂಬಂಧಪಟ್ಟಂತಹ ಹಲವಾರು ಪ್ರಯೋಗಗಳಿಗೆ ಒಳಪಟ್ಟಿದ್ದೆವು.  ಮೈಸೂರಿನಲ್ಲಿ ಕಲಾಮಂದಿರದಂತಹ ಭವ್ಯ ರಂಗಮಂದಿರವಿದ್ದೂ ಅದನ್ನು ಮುಟ್ಟದೆ ಅದರ ಹಿತ್ತಲಿನಲ್ಲಿ ತಿಪ್ಪೆಯ ಹಾಗಿದ್ದ ಜಾಗದಲ್ಲಿ ರಂಗಾಯಣವೆಂಬ ಸಂಸ್ಥೆ ಸ್ಥಾಪಿಸಿದ ಕಾರಂತರು  ಕಲಾವಿದರಿಂದಲೇ  ಆ ಹಿತ್ತಲಿನಲ್ಲಿಯೇ ಹಲವಾರು  ರಂಗಮಂದಿರಗಳನ್ನು ಕಟ್ಟಿಸಿದರು. ಇವತ್ತು ಜನಪ್ರಿಯಗೊಂಡಿರುವ ಮೈಸೂರಿನ ವನರಂಗ, ಭೂಮಿಗೀತ ರಂಗಮಂದಿರಗಳೆರಡೂ ನಾವಂದು ಮಾಡಿದ ಶ್ರಮದಾನದ ಫಲಶ್ರುತಿಗಳು.  ಹೀಗೆ ಪ್ರೊಸೀನಿಯಂ ಮಾದರಿಯ ಪ್ರದರ್ಶನದಿಂದ ನಮ್ಮನ್ನು ಹೊರಗಡೆ ಕರೆದುಕೊಂಡು ಬಂದು ಇಂತಹ ಒಂದು ಆವರಣದ ಜೊತೆ ನಟ ಪ್ರತಿಸ್ಪಂದಿಸುವ ಒಂದು ಹೊಸ ಮಾರ್ಗಕ್ಕೆ ನಮ್ಮನ್ನು ಅವರು ಒಡ್ಡಿದರು. ಈ ಅನುಭವದ ಹಿನ್ನಲೆಯಲ್ಲೇ ನಂತರದ ದಿನಗಳಲ್ಲಿ ಸಿರಿಗೆರೆ, ಬಿಜಾಪುರದಲ್ಲಿ ನಾನು ಕೆಲವು ಅಂತಹ ಪ್ರಯೋಗಗಳನ್ನು ನಡೆಸಿದ್ದೇನೆ. ಅಂತಹ ಕಡೆ ದೊರೆಯುವ ಸಂಪನ್ಮೂಲಗಳಿಂದಲೇ ರಂಗಮಂಚವನ್ನು ಸಿದ್ಧಪಡಿಸಿಕೊಂಡಿದ್ದೇನೆ. ಮತ್ತು ನಾನು ಪ್ರತಿವರುಷ ಸಂಚಾರಿ ಥಿಯೇಟರ್‌ನಿಂದ ನಡೆಸುವ “ಸಂತೆ ಆಟ” ಕೂಡ ಇಂಥದೇ ಪರಿಕಲ್ಪನೆಯ ಪ್ರದರ್ಶನ . ಇರುವ ಆವರಣದಲ್ಲಿ ಮಕ್ಕಳು ಜಾತ್ರೆ ಮಾಡುತ್ತಾರೆ. ರಸ್ತೆಯಲ್ಲೇ ತೇರನ್ನೆಳೆಯುತ್ತಾರೆ. ಸಿಗುವ ಆವರಣದಲ್ಲೇ ಅಂಗಡಿ ಹೂಡಿ ಸಂತೆಯ ಆಟ ಆಡುತ್ತಾರೆ. ಈ ಅನುಭವಗಳ ಹಿನ್ನಲೆಯಲ್ಲಿ ನಾನು 5-6-0 ಪ್ರಾಜೆಕ್ಟ ನ ಆಡಿಯಲ್ಲಿ ಮತ್ತೊಮ್ಮೆ ಆವರಣದ ಹೊಸ ಆವಿಷ್ಕಾರವನ್ನು ಕಂಡುಕೊಳ್ಳುವ ಸಾಹಸದ ಮೂಲಕ ಹೊಸತೇನಾದರೂ ಕಲಿಯುವ ಹಂಬಲದಲ್ಲಿ ಈ ಪ್ರಾಜೆಕ್ಟ್ ಅನ್ನು ಮಾಡಲು ಉತ್ಸುಕಳಾಗಿದ್ದೇನೆ.

## ನನ್ನ ಆಯ್ಕೆಯ ಸ್ಥಳ

ಬೆಂಗಳೂರಿನ ದಕ್ಷಿಣ ಭಾಗದಲ್ಲಿರುವ ಗಾಂಧಿಬಜಾರಿನ ದೋಸೆ ಅಂಗಡಿಯಾದ **"ವಿದ್ಯಾರ್ಥಿ ಭವನ್"**

**32, "ವಿದ್ಯಾರ್ಥಿ ಭವನ್",**
**ಗಾಂಧಿಬಜಾರ್ ಮುಖ್ಯ ರಸ್ತೆ,**
**ಬಸವನಗುಡಿ, ಬೆಂಗಳೂರು -560004**

## ಆಯ್ಕೆಗೆ ಕಾರಣಗಳು

ನಾನು ಹುಟ್ಟಿದ್ದೇ ಬೆಂಗಳೂರಿನ ಹೃದಯ ಭಾಗದಂತಿರುವ, ಸಾಂಸ್ಕೃತಿಕವಾಗಿ ಶ್ರೀಮಂತಿಕೆಯನ್ನು ಮೆರೆದಿರುವ ಬಸವನಗುಡಿಯಲ್ಲಿ. ನನ್ನ ಬಾಲ್ಯ, ಆಟ, ಓದು ಎಲ್ಲವೂ ಹೆಚ್ಚು ಕಡಿಮೆ ಇದರ ಸುತ್ತಮುತ್ತಲಿನಲ್ಲೇ. ಅಪ್ಪನ ಕೈ ಹಿಡಿದು ಗಾಂಧಿಬಜಾರಿನ ರಸ್ತೆ ರಸ್ತೆಗಳಲ್ಲಿ ಓಡಾಡುತ್ತಾ ತಿಂಗಳಿಗೊಮ್ಮೆ ಸಂಬಳ ಬಂದ ಮೊದಲ ವಾರದಲ್ಲೇ ವಿದ್ಯಾರ್ಥಿಭವನಕ್ಕೆ ಬಂದು ದೋಸೆ ತಿನ್ನುವುದು ನನ್ನ ಜೀವನದ ಮರೆಯಲಾಗದ ನೆನಪು. ಇದೇ ವಿದ್ಯಾರ್ಥಿಭವನ ಮುಂದೆ ನನ್ನ ವಿದ್ಯಾರ್ಥಿ ಜೀವನದಲ್ಲೂ ಮರೆಯಲಾಗದ ಅತ್ಯಂತ ಸಿಹಿನೆನಪುಗಳ ಸಾಲಿಗೆ ಸೇರುವಂತದ್ದು. ಅಲ್ಲಿ ದೋಸೆ ತಿನ್ನುವುದು ಬಹಳ ಮರ್ಯಾದೆಯ ಸಂಕೇತವಾಗಿ ನಮಗೆ ತೋರುತ್ತಿತ್ತು. ಕಾರಣ ನಾವು ಗೌರವಿಸುವ ಗೌರವಾನ್ವಿತ ವ್ಯಕ್ತಿಗಳು, ಕಲಾಕಾರರು, ಸಾಹಿತಿಗಳು ಎಲ್ಲರೂ ಅಲ್ಲಿಗೆ ಬಂದು ದೋಸೆ ತಿನ್ನುತ್ತಿದ್ದರು ಎಂಬುದು. ಈ ರೀತಿ ಈ ದೋಸೆ ಅಂಗಡಿಯ ಜೊತೆ ಒಂದು ಭಾವನಾತ್ಮಕವಾದ ಸಂಬಂಧ ಈಗಲೂ ಇರುವುದರಿಂದ ವಿದ್ಯಾರ್ಥಿ ಭವನ್ ನನ್ನ ಆಯ್ಕೆ ಆಗಿದೆ.

ಗಾಂಧಿಬಜಾರ್ ನಂತಹ ಜನಭರಿತ ಜಾಗದಲ್ಲಿ ಹೋಟೆಲುಗಳಿಗೆ ಬರವಿಲ್ಲ. ವಿದ್ಯಾರ್ಥಿಭವನದ ದೋಸೆಯ ಹಾಗೆ ಬೇರೆ ಕಡೆಗಳಲ್ಲಿ ದೋಸೆ ತಯಾರಾಗುವುದೇ ಇಲ್ಲ ಎಂಬ ಮಾತೂ ನಿಜವೇನಲ್ಲ. ಆದರೆ ವಿದ್ಯಾರ್ಥಿ ಭವನದ ದೋಸೆ ಕೇವಲ ದೋಸೆ ಮಾತ್ರ ಆಗಿ ಉಳಿದಿಲ್ಲ. ಎಲ್ಲರ ಹಾಗೆ ಅಕ್ಕಿ, ಉದ್ದು, ಮೆಂತ್ಯ, ಅವಲಕ್ಕಿಗಳನ್ನೇ ನೆನೆಸಿ, ರುಬ್ಬಿ ದೋಸೆ ಮಾಡುತ್ತಾರೆ. ಆದರೆ ಈ ಹೋಟೆಲಿನ ಆವರಣದೊಳಗೊಂದು ಭಾವಪ್ರಪಂಚ ಇದೆ. ಅದರ ಕಂಪು ಇಲ್ಲಿ ತಯಾರಾಗುವ ದೋಸೆ, ಕಾಫಿ, ಇಡ್ಲಿ, ಚಟ್ನಿ, ವಡೆ, ಪೂರಿ ಸಾಗುಗಳಿಗೂ ಪಸರಿಸುತ್ತದೆ. ಆ ಕಂಪನ್ನು ಆಸ್ವಾದಿಸುವ ಸಲುವಾಗಿ ಜನ ಇಲ್ಲಿಗೆ ನೂಕುನುಗ್ಗಲಾಗುತ್ತಾರೆ. ಈ ವಿದ್ಯಾರ್ಥಿಭವನಕ್ಕೆ ಅದರದ್ದೇ ಆದ ಒಂದು ಗುಣ ಇದೆ. ವ್ಯಕ್ತಿತ್ವ ಇದೆ. ಈ ವ್ಯಕ್ತಿತ್ವ ವಿದ್ಯಾರ್ಥಿ ಭವನದ ಆವರಣದಲ್ಲಿ ಎಲ್ಲರನ್ನೂ ಆಹ್ವಾನಿಸುವ, ಬಂದವರಲ್ಲಿ ಚೈತನ್ಯವನ್ನು ಉಕ್ಕಿಸುವಂತಹ ಗುಣವನ್ನು ಹೊಂದಿದೆ. ಹಾಗಾಗಿ ಇಲ್ಲಿಗೆ ಬರುವವರೆಲ್ಲ ಈ ಆವರಣದೊಂದಿಗೆ ಒಂದು ಸಂಬಂಧವನ್ನು ಹೊಂದಿರುತ್ತಾರೆ. ಹಾಗಾಗಿ ಇಲ್ಲಿನ ಆ ಯಾವ ಗುಣ ಇಷ್ಟು ದಿನಗಳ ಕಾಲ ಈ ದೋಸೆ ಅಂಗಡಿಯನ್ನು ಕಾಪಿಟ್ಟಿದೆ ಎಂಬುದನ್ನು ಹುಡುಕುವ ಪ್ರಯತ್ನ ನಮ್ಮದು.

ಅಗಾಧವಾಗಿ ಒಂದು ಕಡೆ ಬೆಂಗಳೂರು ಬೆಳೆಯುತ್ತಿದೆ. ಎಲ್ಲರೂ ಬಹುಮಹಡಿ ಕಲ್ಪನೆಗೆ ಮಾರುಹೋಗಿ ಹಳೇ ಕಟ್ಟಡಗಳೆಲ್ಲ ಹೊಸ ರೂಪ ಪಡೆಯುತ್ತಿದೆ. ನೆಲದ ಬೆಲೆ ಅಂತೂ ಗಗನಕ್ಕೇರಿದೆ. ಇಂಥಹ

ಸಂದರ್ಭದಲ್ಲೂ 1943 ರಲ್ಲಿ ವಿದ್ಯಾರ್ಥಿಗಳಿಗಾಗಿ ಹುಟ್ಟಿಕೊಂಡ ಈ ದೋಸೆ ಅಂಗಡಿ ಎರಡು ಮ್ಯಾನೇಜ್ಮೆಂಟ್ ಗಳು ಬದಲಾಗಿದ್ದರೂ ತಣ್ಣಗೆ ತಾನಿರುವಂತೆಯೇ ಇದ್ದು ಜನರನ್ನು ಅದೇ ರೀತಿ ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದೆ. ಬಹುಶ: ಈ ವಿದ್ಯಾರ್ಥಿಭವನ ಇವತ್ತು ಉಳಿದುಕೊಂಡಿರುವುದಕ್ಕೆ ಕಾರಣ ಇಲ್ಲಿನ ಜನರೂ ಕೂಡ. ವಿದ್ಯಾರ್ಥಿಭವನದ ಕತೆ ವಂಶಪಾರಂಪರ್ಯವಾಗಿ ಹರಿದು ಬಂದಿದೆ. ಹಾಗಾಗಿ ತಾತ, ಅಪ್ಪಂದಿರ ಬಾಯಲ್ಲಿ ಹರಿದು ಬಂದ ಮಾತುಗಳ ಮೋಡಿಯಿಂದಲೇ ಇವತ್ತಿನ ಹುಡುಗ ಹುಡುಗಿಯರು ಇಂದಿಗೂ ಇಲ್ಲಿಗೆ ದೌಡಾಯಿಸುತ್ತಾರೆ. ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ, ಕಲಾತ್ಮಕವಾಗಿ ಬಹಳ ಆಸಕ್ತಿ ಹುಟ್ಟಿಸಿದ ಈ ಮೀಟಿಂಗ್ ಪಾಯಿಂಟ್ ಇವತ್ತು ಇಂದಿಗೂ ಇವತ್ತಿನ ಪೀಳಿಗೆಯ ಕಲಾವಿದರಿಂದ, ಸಾಹಿತಿಗಳಿಂದ, ಕವಿಗಳಿಂದ, ಆಟಗಾರರಿಂದ, ರಾಜಕಾರಣಿಗಳಿಂದ ಮತ್ತು ಶ್ರೀಸಾಮಾನ್ಯರಿಂದ ವಿಶೇಷ ಮನ್ನಣೆ ಪಡೆದಿದೆ. 1947 ಆಗಸ್ಟ್ 15 ರಂದು ಸ್ವಾತಂತ್ರ್ಯ ಬಂದ ದಿನ ಶುಕ್ರವಾರ ಆಗಿದ್ದು, ಅಂದು ಸ್ವಾತಂತ್ರೋತ್ಸವದ ಸಂತೋಷಕ್ಕೆ ಅಂಗಡಿಗೆ ಘೋಷಿಸಿದ ರಜೆ ಇಂದಿಗೂ ಹಾಗೆಯೇ ಮುಂದುವರಿದಿದೆ. ಅದಕ್ಕಾಗಿಯೇ ಶುಕ್ರವಾರ ವಿದ್ಯಾರ್ಥಿಭವನಕ್ಕೆ ರಜೆ!

ಇಲ್ಲಿಗೆ ಬರುವ ಸುಪ್ರಸಿದ್ಧರೆಲ್ಲರೂ ಮನಸ್ಸು ಮಾಡಿದರೆ ವಿದ್ಯಾರ್ಥಿಭವನಕ್ಕೆ ಫೋನಾಯಿಸಿ ಅಥವಾ ಆನ್ಲೈನ್ ನಲ್ಲಿಯೇ ಆರ್ಡರ್ ಮಾಡಿ ತಮ್ಮ ಮನೆಗಳಿಗೆ ಪಾರ್ಸಲ್ ಮಾಡಿಸಿಕೊಳ್ಳಬಹುದು. ಆದರೆ ಆ ಗಣ್ಯರು ತಮ್ಮ ಜನಪ್ರಿಯತೆ, ಅಹಂ, ಸೌಲಭ್ಯಗಳೆಲ್ಲವನ್ನೂ ಬದಿಗಿಟ್ಟು ಗಾಂಧಿಬಜಾರಿನ ಈ ಗಿಜಿಗಿಜಿ ರಸ್ತೆಯ ಇಕ್ಕಟ್ಟಿನ ಪುಟ್ಟ ಹೋಟೆಲಿಗೆ ಬಂದು ಅಲ್ಲಿಯೇ ಉಣ್ಣುತ್ತಾರೆ. ಇದರ ವಿಶೇಷತೆಗಳ ಅರಿವಿರುವವರೂ, ವಿಶೇಷಗಳೇನು ಎಂದು ಅರಿಯಬಯಸುವವರೂ ಎಲ್ಲರೂ ಇಲ್ಲಿಗೇ ಬರುವುದೇ ಇಲ್ಲಿನ ವಿಶೇಷ.

**ಇಲ್ಲಿ ನಾನೇನು ಮಾಡುತ್ತೇನೆ?**

ಇಂತಹ ಒಂದು ಜಾಗದಲ್ಲಿ ಮತ್ತೊಮ್ಮೆ ದೋಸೆ, ಕಾಫಿಗಳೊಂದಿಗೆ "ಸಾಹಿತ್ಯಾವಲೋಕನ" ಮಾಡುವ ಒಂದು ರೂಪಕವನ್ನು ನಿಭಾಯಿಸುವುದು. ಇಲ್ಲಿ ಪ್ರದರ್ಶಿಸುವುದು ಎನ್ನುವ ಬದಲು ನಿಭಾಯಿಸುವುದು ಎಂದು ಹೇಳುತ್ತಿರುವ ಉದ್ದೇಶ ಇಷ್ಟೆ. ಇಲ್ಲಿ ಪ್ರದರ್ಶಕರು ಇರುತ್ತಾರಾದರೂ, ಪ್ರೇಕ್ಷಕರೂ ಕೂಡ ಪ್ರದರ್ಶಕರೇ ಆಗಿರುತ್ತಾರೆ. ವಿದ್ಯಾರ್ಥಿಭವನದ ಒಳ ಆವರಣ ಮೇಜು ಕುರ್ಚಿಗಳು, ಅದು ಇರುವ ಹಾಗೆಯೇ ಇರುತ್ತದೆ. ದೋಸೆ, ಕಾಫಿ ಗಳ ಸರಬರಾಜೂ ನಡೆಯುತ್ತಿರುತ್ತದೆ. ದಿನಕ್ಕಿಂತ ಭಿನ್ನವಾದ ಒಂದು ಆವರಣದ ಗಂಧ ಸೃಷ್ಟಿಗೊಂಡಿರುತ್ತದೆ. ಅಲ್ಲಿ ಈಗಾಗಲೇ ಆಗಿಹೋಗಿರುವ ಸಾಹಿತಿಗಳ, ಕಲಾಕಾರರ ಜೊತೆ ಇಂದಿನ ಕಲಾಕಾರರನ್ನು, ಸಾಹಿತಿಗಳನ್ನು ಆ ಆವರಣದಲ್ಲಿ ಮತ್ತೊಮ್ಮೆ ಆವಿರ್ಭವಿಸುವಂತೆ ಮಾಡುವುದು. ಹಳೆಯ ಕನ್ನಡ ಸಾಹಿತ್ಯ, ಕನ್ನಡದ ಪ್ರೀತಿಯ ಮಾತು ಮತ್ತು ಇಂದಿನ ಕನ್ನಡ ಸಾಹಿತ್ಯ, ಇಂದಿನ ಕನ್ನಡದ ಪ್ರೀತಿಯ ಮಾತು – ಇವೆಲ್ಲವುಗಳ ರೂಪಕವೊಂದು ಅಲ್ಲಿ ತಾನೇ ತಾನಾಗಿ ಜರುಗುವ ಹಾಗೆ ಯೋಜಿಸುವುದು. ಇವೆಲ್ಲವೂ ಪೂರ್ವಯೋಜಿತವೂ ಹೌದು, ಹಾಗೆ ಸಂಪೂರ್ಣ ಯೋಜಿತವಲ್ಲದ್ದೂ ಹೌದು. ಹೀಗೆ ಅಂದಾಜಿನ ಒಂದು ಚೌಕಟ್ಟಿನಲ್ಲಿ ಈ ಕಾರ್ಯಕ್ರಮ ಘಟಿಸುವ ಹಾಗೆ ನಿರ್ವಹಿಸುವುದು. ಇದರೊಳಗೆ ಸಂಗೀತ, ರೆಕಾರ್ಡೆಡ್ ಸಂಗೀತ, ವಾಚನ, ಹಾಡು, ನೃತ್ಯ, ಹರಟೆ, ಸಂಭಾಷಣೆ, ದೋಸೆಯ ಮಹತ್ವದ ಪತ್ರಗಳು, ಕೇಳುವ ಮಾತುಗಳು, ಆಡುವ ಮಾತುಗಳು, ಕಾಣಿಸುವ ಚಿತ್ರಗಳು ಜೊತೆಗೆ ದೋಸೆಯ ಘಮ ಘಮ ಎಲ್ಲವೂ ಇರುತ್ತದೆ.

ಈ ಮೂಲಕ ಈಗಾಗಲೇ ತನ್ನದೇ ಆದ ಗುಣ ಮತ್ತು ವ್ಯಕ್ತಿತ್ವವನ್ನು ಹೊಂದಿರುವ ವಿದ್ಯಾರ್ಥಿಭವನಕ್ಕೆ ಇವತ್ತಿನ ಐಟಿ ಬಿಟಿ ಯುಗದಲ್ಲಿ ಹೊಸ ಅರ್ಥ ಕೊಡುವ ಒಂದು ಸಣ್ಣ ಪ್ರಯತ್ನ ಇದು. ಎಲ್ಲರನ್ನೂ ಒಮ್ಮೆ

ಮತ್ತೊಂದು ಯುಗಕ್ಕೆ ಕರೆದು ಕೊಂಡು ಹೋಗುವ ಮತ್ತು ವಾಪಸ್ಸು ಇಂದಿಗೇ ತಂದುಬಿಡುವ ಒಂದು ಪುಟ್ಟ "**ಒಂದು ಗಂಟೆಯ ಪ್ರಯಾಣ.**" ಇಂದಿನ ಮತ್ತು ಹಿಂದಿನ ಬದುಕನ್ನು ಮತ್ತೊಮ್ಮೆ ಬದುಕುವ ಪ್ರಯತ್ನ. ಘಟಿಸಿಹೋಗಿರುವ ಬದುಕನ್ನು ಮತ್ತೊಮ್ಮೆ ಬದುಕುವ ಪ್ರಯತ್ನ ಮಾಡುತ್ತಲೇ ಇವತ್ತಿನವರ ಜೊತೆ ಪ್ರತಿಸ್ಪಂದಿಸುವ ಒಂದು ಕಾರ್ಯಕ್ರಮ. ಕಲಾಕಾರರು, ಸಾಹಿತಿಗಳು ಎಲ್ಲರಿಗೂ ಬದುಕಲು ಒಂದು ಜಾಗ, ಹವ, ಭಾವ ಎಲ್ಲವನ್ನೂ ಪ್ರೇರಕವಾಗಿ ನೀಡುತ್ತೇವೆ. ಅವರು ಆ ಸಂಜೆಯ ಒಂದು ಗಂಟೆಯ ಆ ಸಮಯದಲ್ಲಿ , ಆ ಆವರಣಕ್ಕೆ ತಾವು ಬದುಕುವ ಮೂಲಕ ಜೀವ ತುಂಬುತ್ತಾರೆ. ಎಲ್ಲರ ಪಂಚೇಂದ್ರಿಯಗಳೂ ಜಾಗ್ರುತಗೊಂಡು( ದೃಶ್ಯ, ಶ್ರವಣ, ಜಿಹ್ವಾ, ಘ್ರಾಣ, ಸ್ಪರ್ಶ) ಆ ಆವರಣದಲ್ಲಿ ಅವೆಲ್ಲವನ್ನೂ ಅನುಭವಿಸುತ್ತಾರೆ. ಆ ಆವರಣಕ್ಕೊಂದು ಸಾಹಿತ್ಯ ಸ್ಪರ್ಶ, ಕಲಾಸ್ಪರ್ಶ, ಸಂಗೀತ ಸ್ಪರ್ಶ ವನ್ನು ಏಕಕಾಲದಲ್ಲಿ ನೀಡುತ್ತಾರೆ.

***ವಿಶೇಷ ಮನವಿ:***

**ವಿದ್ಯಾರ್ಥಿ ಭವನಕ್ಕೆ ಶುಕ್ರವಾರ ರಜೆ ಇರುವುದರಿಂದ** ಈ ಕಾರ್ಯಕ್ರಮ **ಶುಕ್ರವಾರದಂದೇ** ಆಗುವ ಹಾಗೆ ಯೋಜಿಸಬೇಕು . ಮತ್ತು ಇಲ್ಲಿಗೆ ಬರುವ ಪ್ರೇಕ್ಷಕರು ನಾವು **ಆಹ್ವಾನಿಸಿದವರು** ಮಾತ್ರವೇ ಆಗಿರುತ್ತಾರೆ.

**ಸಹಯೋಗ:**

**ಸಂಚಾರಿ ಥಿಯೇಟರ್** ಈ ಕಾರ್ಯಕ್ರಮಕ್ಕೆ ತನ್ನ ಸಹಯೋಗವನ್ನು ನೀಡಲು ಒಪ್ಪಿರುತ್ತದೆ. ಇಡೀ ಕಾರ್ಯಕ್ರಮವನ್ನು ಸಜ್ಜುಗೊಳಿಸುವ ಮತ್ತು ತಾಂತ್ರಿಕವಾಗಿ ತನ್ನ ಸಂಪೂರ್ಣ ಸಹಾಯವನ್ನು ಮತ್ತು ಆ ದಿನದ ಕಾರ್ಯಕ್ರಮದ ಉಸ್ತುವಾರಿಯನ್ನು ನೋಡಿಕೊಳ್ಳಲು ಒಪ್ಪಿಕೊಂಡಿರುತ್ತದೆ.

## ಯೋಜನೆ ಕಾರ್ಯಸೂಚಿ

**ಆಗಸ್ಟ್ :** ಸಂಶೋಧನೆ

**ಸೆಪ್ಟೆಂಬರ್:** ಅಗತ್ಯ ಸಾಮಾಗ್ರಿಗಳ ಸಂಗ್ರಹಣೆ ( ಸಾಹಿತ್ಯಿಕ ಸಾಮಾಗ್ರಿಗಳು, ಆಡಿಯೋ ಮತ್ತು ವೀಡಿಯೋ ಸಾಮಗ್ರಿಗಳು)

**ಅಕ್ಟೋಬರ್ :** ಪಠ್ಯರಚನೆ ಮತ್ತು ಯೋಜನೆ

**ನವೆಂಬರ್ :** ಆಗಿಹೋಗಿರುವ ಪಾತ್ರಗಳನ್ನು ನಿಭಾಯಿಸುವ ಕಲಾವಿದರ ಜೊತೆ ಪಾತ್ರವನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆ ಮತ್ತು ಇವತ್ತಿನ ಸಾಹಿತಿಗಳ , ಕಲಾವಿದರ ಜೊತೆ ಮಾತುಕತೆ.

**ಡಿಸೆಂಬರ್:** ಕಾರ್ಯಕ್ರಮ